**ಪ್ರಧಾನ ದೀವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ.**

**ಸಿ.ಸಿ ನಂ: 936/2017**

**ಪಿಡಬ್ಲ್ಯು ೨**
**ಸಿಡಬ್ಲ್ಯು ೧೯**

ಹೆಸರು : ಸುದೇಶ ಸುನೀಲ ಬೋರಕರ

ವಯಸ್ಸು : **49** ವರ್ಷ

ಉದ್ಯೋಗ : ವ್ಯಾಪಾರ

ವಾಸ : ಬೂರಿ ಫೊಂಡಾ, ಗೋವಾ.

ದಿನಾಂಕ **24-02-2020** ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಎ.ಪಿ.ಪಿ ಅವರಿಂದ.**

ದಿನಾಂಕ 14-05-2016 ರಂದು ಮಧ್ಯಾಹ್ನ 3.30 ಕ್ಕೆ ನಾನು, ಚಾಸಾ 1, 6 ರಿಂದ 13 ರವರು ಮಾಡಿಗುಂಜಿ ಗ್ರಾಮದಿಂದ 3 ಕಾರಗಳಲ್ಲಿ ಜಾಂಬೋಟಿ ಮಾರ್ಗವಾಗಿ ಗೋವಾಕ್ಕೆ ಹೋಗುತ್ತಿದ್ದೆವು . ನಾನು, ನನ್ನ ಹೆಂಡತಿ ಶಿಲ್ಪಾ, ನನ್ನ ಇಬ್ಬರು ಮಕ್ಕಳು ಒಂದು ಕಾರ ಸಂಖ್ಯೆ ಜೆಎ-05/ಬಿ-0543 ರಲ್ಲಿ ಹೋಗುತ್ತಿದ್ದೆವು, ಆ ಕಾರನ್ನು ನಾನು ಚಲಾಯಿಸುತ್ತಿದ್ದೆ. ಇನ್ನೊಂದು ಕಾರ ಸಂಖ್ಯೆ ಜಿಡಿ-05/1367 ರಲ್ಲಿ ಚಾಸಾ 10 ರಿಂದ 13 ರವರು ಹೋಗುತ್ತಿದ್ದು, ಆ ಕಾರನ್ನು ಚಾಸಾ 10 ರವರು ಚಲಾಯಿಸುತ್ತಿದ್ದರು. ಇನ್ನೊಂದು ಕಾರ ಸಂಖ್ಯೆ ಜಿಎ-05/ಡಿ-7589 ರಲ್ಲಿ ಚಾಸಾ 1, 6 ರಿಂದ 9 ರವರು ಹೋಗುತ್ತಿದ್ದರು, ಆ ಕಾರನ್ನು ಚಾಸಾ 1 ರವರು ಚಲಾಯಿಸುತ್ತಿದ್ದರು. ನಾವೆಲ್ಲರೂ ಒಬ್ಬರ ಹಿಂದೆ ಒಬ್ಬರು ಹೋಗುತ್ತಿದ್ದೆವು. ನಾನು ಮುಂದೆ ಹೋಗುತ್ತಿದ್ದೆ. ನಾವು ಅಷ್ಟೊಳ್ಳಿ ಕ್ರಾಸ ಬಳಿ ಬಂದಾಗ ಎದುರಿನಿಂದ ಒಬ್ಬ ಟ್ರಕ ಚಾಲಕ ತನ್ನ ಟ್ರಕ ಸಂಖ್ಯೆ ಜಿಜೆ -12/ಬಿಟಿ-0500 ನ್ನು ಅತಿ ವೇಗವಾಗಿ ಚಲಾಯಿಸಿಕೊಂಡು ಬಂದನು . ಆ ವೇಗವನ್ನು ನೋಡಿ ನಾನು ನನ್ನ ಕಾರನ್ನು ರಸ್ತೆಯ ಎಡಭಾಗದಲ್ಲಿ ತೆಗೆದುಕೊಂಡು ಮುಂದೆ ಹೋದೆನು. ಆಗ ಆ ಕಂಟೇನರ ಟ್ರಕ ಚಾಸಾ 10 ರವರ ಕಾರಿಗೆ ಡಿಕ್ಕಿ ಪಡಿಸಿ, ಎಡಮಗ್ಗಲಾಗಿ ಪಲ್ಟಿಯಾಗಿ ಬಿದ್ದಿತು. ನಾನು ನನ್ನ ಕಾರನ್ನು ನಿಲ್ಲಿಸಿ ಬಂದು ನೋಡಿದಾಗ ಚಾಸಾ 10 ರವರ ತಲೆಗೆ ತೀವ್ರ ಪೆಟ್ಟಾಗಿ ರಕ್ತ ಬರುತ್ತಿತ್ತು. ಚಾಸಾ 11 ರವರ ಭುಜಕ್ಕೆ ಪೆಟ್ಟಾಗಿತ್ತು. ಸ್ಥಳದಲ್ಲಿ ಟ್ರಕ ಚಾಲಕ ಇರಲಿಲ್ಲ. ನಂತರ ನಾವು ಅಂಬುಲೆನ್ಸ ಕರೆಸಿ ರಾಮ ನಗರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆ ಕೊಡಿಸಿದೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಚಾಸಾ 10 ರವರನ್ನು ಬೆಳಗಾವಿ ಕೆ.ಎಲ.ಇ ಆಸ್ಪತ್ರೆಗೆ

ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದೆವು. ಅನಂತರ ಅಪಘಾತ ಸ್ಥಳದಲ್ಲಿ ಟ್ರಕ ಪಲ್ಟಿಯಾಗಿ ಬಿದ್ದಾಗ ಆ ಟ್ರಕನ ಅಡಿಯಲ್ಲಿ ಇಬ್ಬರು ವ್ಯಕ್ತಿಗಳು ಸಿಕ್ಕಿಕೊಂಡು ಸತ್ತಿದ್ದರು ಎಂದು ವಿಷಯ ತಿಳಿಯಿತು. ಅವರ ಹೆಸರುಗಳು ಅರುಣ ಮಿರಾಶಿ ಮತ್ತು ಅಶೋಕ ಮಿರಾಶಿ ಎಂದು ತಿಳಿಯಿತು. ನಂತರ ಚಾಸಾ 10 ರವರಿಗೆ ಆಪರೇಶನ ಮಾಡಲಾಯಿತು. ನಂತರ ಆತನನ್ನು ಗೋವಾಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಚಿಕಿತ್ಸೆ ಕೊಡಿಸಿದೆವು . ಅಪಘಾತವು ಟ್ರಕ ಚಾಲಕನ ತಪ್ಪಿನಿಂದ ಆಗಿತ್ತು. ನಮ್ಮ ಕಾರಗಳನ್ನು ಮತ್ತು ಟ್ರಕನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿಪಿ-2 ರಿಂದ 7 ಫೋಟೊಗಳಲ್ಲಿ ಕಾಣುವ ಟ್ರಕ್ಕನ್ನು ಮತ್ತು ಕಾರಗಳನ್ನು ನೋಡಿ ಗುರುತಿಸಿರುತ್ತಾರೆ. ಟ್ರಕ ಚಾಲಕನನ್ನು ನಾನು ನೋಡಿಲ್ಲ.

*(ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ನುಡಿಯುತ್ತಿದ್ದುದರಿಂದ ಸಸಅ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸಸಅ ರವರಿಗೆ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)*

**<u>ಪಾಟೀ ಸವಾಲುಃ ಸಸಅ ರವರಿಂದ</u>**

ಆ ದಿನ ನನ್ನ ಮುಂದೆ ಚಾಸಾ 10 ರವರ ಕಾರ ಹೋಗುತ್ತಿತ್ತು, ನಾನು ಅವರ ಹಿಂದೆ ಹೋಗುತ್ತಿದ್ದೆ ಎಂದರೆ ಸರಿಯಲ್ಲ. ಆಗ ಆರೋಪಿಯು ತನ್ನ ಟ್ರಕ್ಕನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಚಾಸಾ 10 ರವರ ಕಾರಿಗೆ ಡಿಕ್ಕಿ ಪಡಿಸಿದನು, ಆಗ ನಾನು ಈ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿದ್ದೆ ಎಂದರೆ ಸರಿಯಲ್ಲ . ಆ ರಸ್ತೆಯ ಪಕ್ಕದಲ್ಲಿ ಅರುಣ ಮಿರಾಶಿ ಮತ್ತು ಅಶೋಕ ಮಿರಾಶಿರವರು ತಮ್ಮ ಬೈಕನ್ನು ನಿಲ್ಲಿಸಿಕೊಂಡು ಮಾತನಾಡುತ್ತ ನಿಂತಿದ್ದರು ಎಂದರೆ ನಾನು ನೋಡಿಲ್ಲ. ಆರೋಪಿಯು ತನ್ನ ಟ್ರಕ್ಕನಿಂದ ಚಾಸಾ 10 ರವರ ಕಾರಿಗೆ ಡಿಕ್ಕಿ ಪಡಿಸಿದ ನಂತರ ಅವರಿಗೂ ಸಹ ಡಿಕ್ಕಿ ಪಡಿಸಿ ಅಪಘಾತ ಪಡಿಸಿದ್ದ ಎಂದರೆ ನನಗೆ ಗೊತ್ತಿಲ್ಲ. ಅವರಿಬ್ಬರೂ ಸ್ಥಳದಲ್ಲಿಯೇ ಮೃತಪಟ್ಟಿದ್ದರು ಎಂದರೆ ನಿಜ. ಆದರೆ ಆ ಬಗ್ಗೆ ನನಗೆ ನಂತರ ಗೊತ್ತಾಗಿತ್ತು. ಅಪಘಾತ ಕಾಲಕ್ಕೆ ನ್ಯಾಯಾಲಯದಲ್ಲಿರುವ ಆರೋಪಿಯೇ ಟ್ರಕ್ಕನ್ನು ಚಲಾಯಿಸುತ್ತಿದ್ದ ಎಂದರೆ ನಾನು ನೋಡಿಲ್ಲ. ಈಗ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಅಪಘಾತ ಕಾಲಕ್ಕೆ ಟ್ರಕ ಚಲಾಯಿಸುವುದನ್ನು ನಾನು ನೋಡಿದ್ದೆ ಎಂದರೆ ಸರಿಯಲ್ಲ . ಈಗ ಓದಿ ಹೇಳಿದಂತೆ ಪೋಲಿಸರ ಬಳಿ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ . ಸದರಿ ಹೇಳಿಕೆಯನ್ನು ನಿಪಿ -9 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯೇ ಆ ದಿನ ಟ್ರಕ್ಕ ಚಲಾಯಿಸಿದ್ದನ್ನು ನಾನು ನೋಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ</u>**

ಆ ದಿನ ಚಾಸಾ ನನ್ನ ಕಾರ ಮುಂದೆ ಇತ್ತು. ನನ್ನ ಕಾರಿನ ಹಿಂದೆ ಚಾಸಾ 10 ರವರ ಕಾರ ಇತ್ತು. ಆ ಕಾರಿನ ಹಿಂದೆ ಚಾಸಾ 1 ರವರ ಕಾರ ಇತ್ತು. ನಮ್ಮ ಕಾರಗಳ ಮಧ್ಯೆ ಸುಮಾರು 10 ಮೀಟರ ಅಂತರ ಇತ್ತು. ಆ ಸ್ಥಳದಲ್ಲಿ ರಸ್ತೆ ತೀವ್ರ ತಿರುವಿನಿಂದ ಕೂಡಿದೆ ಎಂದರೆ ನಿಜ. ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ ಎಂದರೆ ನಿಜ. ನಮ್ಮ ಎದುರು ಕಡೆಯಿಂದ ರಸ್ತೆಯು ಇಳಿಜಾರಿನಿಂದ ಕೂಡಿದ್ದು, ಆ ಟ್ರಕ ಬರುವ ಕಾಲಕ್ಕೆ ಅದರ ಚಕ್ರಗಳು ರಸ್ತೆಯಿಂದ ಕೆಳಕ್ಕೆ ಇಳಿದು ರಸ್ತೆಯ ಪಕ್ಕದಲ್ಲಿ ಓರೆಯಾಗಿ ಬಿದ್ದಿತ್ತು ಎಂದರೆ ನಿಜ. ಚಾಸಾ 10 ರವರು ಆ ಟ್ರಕ ಬೀಳುವುದನ್ನು ನೋಡಿ ತಮ್ಮ ಕಾರನ್ನು ಬಲಕ್ಕೆ ತೆಗೆದುಕೊಂಡರು ಎಂದರೆ ನಿಜ . ರಸ್ತೆಯ ಪಕ್ಕದಲ್ಲಿ ಗುಂಡಿ ಇದ್ದು, ಚಾಸಾ 10 ರವರ ಕಾರ ಗುಂಡಿಯಲ್ಲಿ ಬಿದ್ದು ಜಖಂ ಗೊಂಡಿತ್ತು ಎಂದರೆ ನಿಜ . ಚಾಸಾ 10 ರವರ ಕಾರ ಗುಂಡಿಯಲ್ಲಿ ಬಿದ್ದುದರಿಂದ ಆ ಕಾರನ ಮೇಲ್ಭಾಗ ಚಾಸಾ 10 ರವರ ತಲೆಗೆ ಬಡಿದು ಪೆಟ್ಟಾಗಿತ್ತು ಎಂದರೆ ನಿಜ. ಚಾಸಾ 10 ರವರಿಗೆ ಪೆಟ್ಟಾದ ಕಾರಣ ಪರಿಹಾರಕ್ಕಾಗಿ ನಾವು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದೇವೆ ಎಂದರೆ ನಿಜ. ಚಾಸಾ 10 ರವರಿಗೆ ಪರಿಹಾರ ಸಿಗಲಿ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಟ್ರಕ ಚಾಲಕನ ತಪ್ಪಿನಿಂದ ಅಪಘಾತ ಆಗಿತ್ತು ಎಂದು ಸುಳ್ಳು ಹೇಳಿದ್ದೆ ಎಂದರೆ ಸರಿಯಲ್ಲ . ಪರಿಹಾರ ಪಡೆಯುವ ಉದ್ದೇಶದಿಂದ ಆ ಟ್ರಕನ ಮೇಲೆ ಸುಳ್ಳು ದೂರು ಸಲ್ಲಿಸಿದ್ದೆವು ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರಗೆ ಬೆರಳಚ್ಚು ಮಾಡಲಾಗಿದೆ)**
**ಓ .ಹೇ .ಕೇ .ಸರಿ ಇದೆ .**

ಪ್ರಧಾನ ಸಿವಿಲ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.

**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ.**

**ಸಿ.ಸಿ ನಂ: 936/2017**

ಪಿಡಬ್ಲ್ಯು ೧
ಸಿಡಬ್ಲ್ಯು ೧

ಹೆಸರು : ರಾಜೇಶ ಸುನೀಲ ಬೋರಕರ

ವಯಸ್ಸು : **51** ವರ್ಷ

ಉದ್ಯೋಗ : ಖಾಸಗಿ ಕೆಲಸ

ವಾಸ : ನವದುರ್ಗಾ ಮಂದಿರ ಹತ್ತಿರ, ಬೂರಿ ಫೊಂಡಾ, ಗೋವಾ.

ದಿನಾಂಕ **24-02-2020** ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಎ.ಪಿ.ಪಿ ಅವರಿಂದ.**

ದಿನಾಂಕ 14-05-2016 ರಂದು ಮಧ್ಯಾಹ್ನ 3.30 ಕ್ಕೆ ನಾನು, ಚಾಸಾ 6 ರಿಂದ 13 ಮತ್ತು 19 ರವರು ಮಾಡಿಗುಂಜಿ ಗ್ರಾಮದಿಂದ 3 ಕಾರಗಳಲ್ಲಿ ಜಾಂಬೋಟಿ ಮಾರ್ಗವಾಗಿ ಗೋವಾಕ್ಕೆ ಹೋಗುತ್ತಿದ್ದೆವು . ಚಾಸಾ 19, ಆತನ ಹೆಂಡತಿ ಶಿಲ್ಪಾ, ಆತನ ಇಬ್ಬರು ಮಕ್ಕಳು, ನನ್ನ ಇಬ್ಬರು ಮಕ್ಕಳು ಒಂದು ಕಾರನಲ್ಲಿ ಹೋಗುತ್ತಿದ್ದರು, ಆ ಕಾರನ್ನು ಚಾಸಾ 19 ರವರು ಚಲಾಯಿಸುತ್ತಿದ್ದರು. ಇನ್ನೊಂದು ಕಾರ ಸಂಖ್ಯೆ ಜಿಡಿ-05/1367 ರಲ್ಲಿ ಚಾಸಾ 10 ರಿಂದ 13 ರವರು ಹೋಗುತ್ತಿದ್ದು, ಆ ಕಾರನ್ನು ಚಾಸಾ 10 ರವರು ಚಲಾಯಿಸುತ್ತಿದ್ದರು. ಇನ್ನೊಂದು ಕಾರ ಸಂಖ್ಯೆ ಜಿಎ-05/ಡಿ-7589 ರಲ್ಲಿ ನಾನು, ಚಾಸಾ 6 ರಿಂದ 9 ರವರು ಹೋಗುತ್ತಿದ್ದೆವು, ಆ ಕಾರನ್ನು ನಾನು ಚಲಾಯಿಸುತ್ತಿದ್ದೆ. ನವೆಲ್ಲರೂ ಒಬ್ಬರ ಹಿಂದೆ ಒಬ್ಬರು ಹೋಗುತ್ತಿದ್ದೆವು. ನಾನು ಹಿಂಬದಿಯಲ್ಲಿದ್ದೆ. ನಾವು ಅಷ್ಟೊಳ್ಳಿ ಕ್ರಾಸ ಬಳಿ ಬಂದಾಗ ಎದುರಿನಿಂದ ಒಬ್ಬ ಟ್ರಕ ಚಾಲಕ ತನ್ನ ಟ್ರಕ ಸಂಖ್ಯೆ ಜಿಜೆ-12/ಬಿಟಿ-0500 ನ್ನು ಅತಿ ವೇಗವಾಗಿ ಚಲಾಯಿಸಿಕೊಂಡು ಬಂದನು . ಆ ರಸ್ತೆ ತಿರುವಿನಿಂದ ಕೂಡಿದ್ದು, ಅಲ್ಲಿ ಇಬ್ಬರು ವ್ಯಕ್ತಿಗಳು ಒಂದು ಬೈಕನ್ನು ನಿಲ್ಲಿಸಿಕೊಂಡು ರಸ್ತೆಯ ಪಕ್ಕದಲ್ಲಿ ನಿಂತಿದ್ದರು . ಆ ಟ್ರಕ ಚಾಲಕ ಅತಿ ವೇಗವಾಗಿ ಟ್ರಕ್ಕನ್ನು ಚಲಾಯಿಸಿ , ರಸ್ತೆ ಪಕ್ಕದಲ್ಲಿ ನಿಂತಿದ್ದ ಬೈಕ ಮತ್ತು ಆ ಇಬ್ಬರು ವ್ಯಕ್ತಿಗಳಿಗೆ ಡಿಕ್ಕಿ ಪಡಿಸಿದನು. ನಂತರ ಆ ಕಂಟೇನರ ಟ್ರಕನ ಹಿಂಭಾಗ ಚಾಸಾ 10 ರವರು ಹೋಗುತ್ತಿದ್ದ ಕಾರಿಗೆ ತಗುಲಿತು. ನಂತರ ಆ ಟ್ರಕ ನಮ್ಮ ಕಾರಿಗೆ ಡಿಕ್ಕಿ ಪಡಿಸಿತು . ಅಪಘಾತದಲ್ಲಿ ಚಾಸಾ 10 ರವರ ತಲೆಗೆ ಮತ್ತು ಚಾಸಾ 11 ರವರ ಭುಜಕ್ಕೆ ಪೆಟ್ಟಾಯಿತು . ಆ ಟ್ರಕ ಚಾಲಕ ಅಪಘಾತದ ನಂತರ ಟ್ರಕ್ಕನ್ನು ಬಿಟ್ಟು ಓಡಿ ಹೋದನು . ಆ

ಚಾಲಕನನ್ನು ನಾನು ನೋಡಿದ್ದೆನು. ಅಪಘಾತವು ಟ್ರಕ ಚಾಲಕನ ತಪ್ಪಿನಿಂದ ಆಗಿತ್ತು. ರಸ್ತೆಯ ಪಕ್ಕದಲ್ಲಿ ನಿಂತಿದ ವ್ಯಕ್ತಿಗಳನ್ನು ನೋಡಿದಾಗ ಅವರಿಬ್ಬರಿಗೂ ತೀವ್ರ ಗಾಯಗಳಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದರು . ಅನಂತರ ಸಾರ್ವಜನಿಕರು ಅಲ್ಲಿ ಸೇರಿದರು. ಅವರು ಮೃತರ ಹೆಸರುಗಳನ್ನು ಹೇಳಿದ್ದರು. ಅವರ ಹೆಸರಗಳು ಅರುಣ ಮಿರಾಶಿ ಮತ್ತು ಅಶೋಕ ಮಿರಾಶಿ ಎಂದು ತಿಳಿಯಿತು . ನಂತರ ಚಾಸಾ 10 ಮತ್ತು 11 ರವರನ್ನು ಖಾನಾಪೂರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆ ಕೊಡಿಸಿದೆ. ಅನಂತರ ಠಾಣೆಗೆ ಹೋಗಿ ದೂರು ಕೊಟ್ಟೆ. ಸಾಕ್ಷಿಯು ದೂರಿನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ -1 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಚಾಸಾ 10 ರವರನ್ನು ಬೆಳಗಾವಿ ಕೆ .ಎಲ.ಇ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದೆವು . ನಮ್ಮ ಕಾರಗಳನ್ನು, ಬೈಕನ್ನು ಮತ್ತು ಟ್ರಕನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು 6 ಫೋಟೊಗಳಲ್ಲಿ ಕಾಣುವ ಟ್ರಕ್ಕನ್ನು, ಬೈಕನ್ನು ಮತ್ತು ಕಾರಗಳನ್ನು ನೋಡಿ ಗುರುತಿಸಿರುತ್ತಾರೆ . 6 ಫೋಟೋಗಳನ್ನು ಕ್ರಮವಾಗಿ ನಿಪಿ-2 ರಿಂದ 7 ಎಂದು ಗುರುತಿಸಲಾಯಿತು. ಟ್ರಕ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಆ ದಿನ ಈ ವ್ಯಕ್ತಿ ಟ್ರಕನ್ನು ಚಲಾಯಿಸುತ್ತಿರಲಿಲ್ಲ . ಆ ದಿನ ನಾನು ನೋಡಿದ ಟ್ರಕ ಚಾಲಕ ನ್ಯಾಯಾಲಯದಲ್ಲಿರುವ ಆರೋಪಿಗಿಂತ ಎತ್ತರದ ವ್ಯಕ್ತಿ ಆಗಿದ್ದ.

*(ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ನುಡಿಯುತ್ತಿದ್ದುದರಿಂದ ಸಸಅ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸಸಅ ರವರಿಗೆ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)*

**ಪಾಟೀ ಸವಾಲುಃ ಸಸಅ ರವರಿಂದ**

ಅಪಘಾತ ಕಾಲಕ್ಕೆ ನ್ಯಾಯಾಲಯದಲ್ಲಿರುವ ಆರೋಪಿಯೇ ಟ್ರಕ್ಕನ್ನು ಚಲಾಯಿಸುತ್ತಿದ್ದ ಎಂದರೆ ಸರಿಯಲ್ಲ. ನಾನು ಈ ಆರೋಪಿಯನ್ನೇ ಆ ದಿನ ನೋಡಿದ್ದೆ ಎಂದರೆ ಸರಿಯಲ್ಲ. ದಿನಾಂಕ 04-03-2017 ರಂದು ಪೋಲಿಸರು ನನ್ನನ್ನು ಠಾಣೆಗೆ ಕರೆಸಿದ್ದರು ಎಂದರೆ ಸರಿಯಲ್ಲ. ಆ ದಿನ ಪೋಲಿಸರು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ತೋರಿಸಿ ಈ ವ್ಯಕ್ತಿಯೇ ಟ್ರಕ ಚಲಾಯಿಸುತ್ತಿದ್ದ ಎಂದು ಹೇಳಿದ್ದರು , ನಾನು ಆರೋಪಿಯನ್ನು ನೋಡಿ ಗುರುತಿಸಿದ್ದೆ ಎಂದರೆ ಸರಿಯಲ್ಲ. ಅನಂತರ ಈಗ ಓದಿ ಹೇಳಿದಂತೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-8 ಎಂದು ಗುತಿಸಲಾಯಿತು. ನ್ಯಾಯಾಲಯದ ಮುಂದಿರುವ

ಆರೋಪಿಯೇ ಆ ದಿನ ಟ್ರಕ್ಕ ಚಲಾಯಿಸಿದ್ದನ್ನು ನಾನು ನೋಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ನಾನು ಐ.ಟಿ.ಐ ವಿದ್ಯಾಭ್ಯಾಸ ಮಾಡಿದ್ದೇನೆ. ಆ ದಿನ ಚಾಸಾ 19 ರವರ ಕಾರ ಮುಂದೆ ಇತ್ತು. ಆತನ ಕಾರನ ಹಿಂದೆ ಚಾಸಾ 10 ರವರ ಕಾರ ಇತ್ತು. ಆ ಕಾರ ಹಿಂದೆ ನನ್ನ ಕಾರ ಇತ್ತು. ನಮ್ಮ ಕಾರಗಳ ಮಧ್ಯೆ ಸುಮಾರು 100 ಅಡಿ ಅಂತರ ಇತ್ತು. ಆ ಸ್ಥಳದಲ್ಲಿ ರಸ್ತೆ ತೀವ್ರ ತಿರುವಿನಿಂದ ಕೂಡಿದೆ ಎಂದರೆ ನಿಜ. ನಾವು 100 ಅಡಿ ದೂರ ಇದ್ದುದರಿಂದ ಎದುರಿನಿಂದ ಬರುವ ವಾಹನಗಳು ನಮಗೆ ಕಾಣಿಸುತ್ತಿರಲಿಲ್ಲ ಎಂದರೆ ನಿಜ. ಆ ಕಡೆಯಿಂದ ಬರುವ ವಾಹನಗಳಿಗೂ ಸಹ ನಮ್ಮ ವಾಹನಗಳು ಕಾಣಿಸುತ್ತಿರಲಿಲ್ಲ ಎಂದರೆ ನಿಜ . ಆ ದಿನ ರಸ್ತೆಯು ನಮ್ಮ ಎದುರು ಕಡೆಯಿಂದ ರಸ್ತೆಯು ಇಳಿಜಾರಿನಿಂದ ಕೂಡಿದ್ದು, ಆ ಟ್ರಕ ಬರುವ ಕಾಲಕ್ಕೆ ಅದರ ಚಕ್ರಗಳು ರಸ್ತೆಯಿಂದ ಕೆಳಕ್ಕೆ ಇಳಿದು ರಸ್ತೆಯ ಪಕ್ಕದಲ್ಲಿ ಓರೆಯಾಗಿ ಬಿದ್ದಿತ್ತು ಎಂದರೆ ನಿಜ.

ಆಗ ಚಾಸಾ 19 ರವರ ಕಾರ ಮುಂದೆ ಹೋಗಿತ್ತು, ಚಾಸಾ 10 ರವರು ಆ ಟ್ರಕ ಬೀಳುವುದನ್ನು ನೋಡಿ ತಮ್ಮ ಕಾರನ್ನು ಬಲಕ್ಕೆ ತೆಗೆದುಕೊಂಡರು . ರಸ್ತೆಯ ಪಕ್ಕದಲ್ಲಿ ಗುಂಡಿ ಇದ್ದು, ಚಾಸಾ 10 ರವರ ಕಾರ ಗುಂಡಿಯಲ್ಲಿ ಬಿದ್ದು ಜಖಂ ಗೊಂಡಿತ್ತು ಎಂದರೆ ನಿಜ. ಚಾಸಾ 10 ರವರ ಕಾರ ಗುಂಡಿಗೆ ಬಿದ್ದ ಶಬ್ಧ ಕೇಳಿ ನಾನು ಕಾರನಿಂದ ಇಳಿದು ಕೆಳಗೆ ಬಂದೆ. ನಾನು ಹಿಂದೆ ಇದ್ದುರಿಂದ, ರಸ್ತೆ ತಿರುವಿನಿಂದ ಕೂಡಿದ್ದರಿಂದ ಅಪಘಾತವು ಹೇಗೆ ಆಯಿತು ಮತ್ತು ಯಾರ ತಪ್ಪಿನಿಂದ ಆಯಿತು ಎಂದು ನಾನು ನೋಡಲಿಲ್ಲ. ಚಾಸಾ 10 ರವರ ಕಾರ ಗುಂಡಿಯಲ್ಲಿ ಬಿದ್ದುದರಿಂದ ಆ ಕಾರನ ಮೇಲ್ಭಾಗ ಚಾಸಾ10 ರವರ ತಲೆಗೆ ಬಡಿದು ಪೆಟ್ಟಾಗಿತ್ತು. ಚಾಸಾ 10 ರವರಿಗೆ ಪೆಟ್ಟಾದ ಕಾರಣ ಪರಿಹಾರಕ್ಕಾಗಿ ನಾವು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದೇವೆ ಎಂದರೆ ನಿಜ . ಚಾಸಾ 10 ರವರಿಗೆ ಪರಿಹಾರ ಸಿಗಲಿ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಹೇಳಿದ್ದೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರಗೆ ಬೆರಳಚ್ಚು ಮಾಡಲಾಗಿದೆ)**
**ಓ .ಹೇ .ಕೇ .ಸರಿ ಇದೆ .**

ಪ್ರಧಾನ ಸಿವಿಲ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.